ಓ ಎಸ್ ನಂ.70/2023

ಡಿ.ಡಬ್ಲ್ಯೂ-1 ಮೌಲಾಸಾಬ ತಂದೆ ಮಹೆಬೂಬಸಾಬ

**(ಇಂದು ದಿನಾಂಕಃ 27-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಎಸ್ ಜಿ ಹೆಚ್ ವಕೀಲರಿಂದ.

ನನ್ನ ಮುಖ್ಯ ವಿಚಾರಣೆಯ ವಿಷಯಗಳಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನನಗೆ ೨ ಜನ ಹೆಂಡತಿಯರು ಎಂದರೆ ಸರಿ. ನನ್ನ ಮೊದಲನೆಯ ಹೆಂಡತಿಯ ಹೆಸರು ನಜಮಾ ಆಗಿರುತ್ತದೆ. ನನ್ನ ಮೊದಲನೆಯ ಹೆಂಡತಿಗೆ ಔರಂಗಜೇಬ, ಜಹಾಂಗೀರ ಮತ್ತು ಷಹಜಾನ ಎಂಬ ೩ ಜನ ಮಕ್ಕಳಿರುತ್ತಾರೆ. ನನ್ನ ೨ನೇ ಹೆಂಡತಿಯ ಹೆಸರು ಮುಮ್ತಾಜಬೇಗಂ ಆಗಿರುತ್ತದೆ. ನನ್ನ ೨ನೇ ಹೆಂಡತಿಗೆ ರಫಿಕ್ ಮತ್ತು ರಿಜ್ವಾನ ಮತ್ತು ನಜಮಾ ಎಂಬ ೩ ಜನ ಮಕ್ಕಳಿರುತ್ತಾರೆ. ನಾವು ಎಲ್ಲರೂ ಇನ್ನೂ ಕೂಡಿಯೇ ಇರುತ್ತೇವೆ. ನನ್ನ ಮಗನಾದ ವಾದಿ ಔರಂಗಜೇಬ ದಾವಾ ಮನೆಯಲ್ಲಿ ವಾಸವಿರುತ್ತಾನೆ ಎಂದರೆ ಸರಿ. ಜಹಾಂಗೀರ ಬಾಡಿಗೆ ಮನೆಯಲ್ಲಿ ವಾಸವಿರುತ್ತಾರೆ. ಷಹಜಾನ ಕಲಬುರಗಿಯಲ್ಲಿ ವಾಸವಿರುತ್ತಾರೆ. ನಾನು ಬಿ ಬಿ ಇಂಗಳಗಿಯಲ್ಲಿ ಮನೆ ಮಾಡಿಕೊಂಡು ವಾಸವಿರುತ್ತೇನೆ.

೨. ದಾವಾ ಮನೆ ನಂಬರ ೮೪೫ ಇರುತ್ತದೆ. ಖುಲ್ಲಾ ಜಾಗೆ ಒಂದು ನನ್ನ ಹೆಸರಿನಲ್ಲಿ ಇರುತ್ತದೆ. ದಾವಾ ಆಸ್ತಿಯ ಖರೀದಿ ಕರಾರು ಪತ್ರ ದಿನಾಂಕ 11-06-2004 ರಂದು ಆಗಿರುತ್ತದೆ. ಖರೀದಿ ಪತ್ರ 2006-2007 ರಲ್ಲಿ ವಾದಿಯ ಹೆಸರಿನಲ್ಲಿ ಆಗಿರುತ್ತದೆ. ಖರೀದಿ ಕರಾರು ಪತ್ರಕ್ಕೆ ನಾನು ಮತ್ತು ಸಾಕ್ಷಿದಾರರಾದ ಗುರಪ್ಪ ಮಾಸ್ತಾರ, ಮೆಹರಾಜ ಜಾಂಗೀರದಾರ, ಸೈಫನಸಾಬರವರು ಸಾಕ್ಷಿದಾರರಾಗಿರುತ್ತೇವೆ. ಖರೀದಿ ಪತ್ರದಲ್ಲಿ ಗುರಪ್ಪ ಮಾಸ್ತಾರ ಸಾಕ್ಷಿದಾರನಾಗಿರುತ್ತಾನೆ. ದಾವಾ ಆಸ್ತಿಯ ಮುಟೇಷನ್ ಯಾವ ವರ್ಷ ಆಗಿದೆ ಎಂದು ಹೇಳಲು

ನೆನಪಿಲ್ಲ. ಖರೀದಿ ಪತ್ರ ಖರೀದಿ ಆದ ಮೇಲೆ ನನ್ನ ಹತ್ತಿರ ಇಟ್ಟುಕೊಂಡಿದ್ದೆ. ನನ್ನ ಮೊದಲನೆಯ ಹೆಂಡತಿ ನಜಮಾರವರು ಈಗ ಮೃತರಾಗಿರುತ್ತಾರೆ. ನನ್ನ ೨ ನೇ ಹೆಂಡತಿ ಮುಮ್ತಾಜ ಬೇಗಂ ಬಿ ಬಿ ಇಂಗಳಗಿ ಗ್ರಾಮದಲ್ಲಿ ವಾಸವಿರುತ್ತಾರೆ. ನನ್ನ ಪ್ರತಿವಾದ ಪತ್ರದಲ್ಲಿ ಬರೆದ ವಿಚಾರ ನನಗೆ ಈಗ ಹೇಳಲು ನೆನಪಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.